3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No. 29/2021**

ಪ್ರಾಸಾ 12

ಚಾಸಾ 14

| | |
|---|---|
| ಹೆಸರು | ನಾಗೇಶ |
| ತಂದೆಯ ಹೆಸರು | ದಾಸಪ್ಪ |
| ವಯಸ್ಸು | 35 ವರ್ಷ |
| ಉದ್ಯೋಗ | ಗಾರೆ ಕೆಲಸ |
| ವಾಸಸ್ಥಳ | ಅಂತರಸನಹಳ್ಳಿ |

ಸಾಕ್ಷಿಯನ್ನು ದಿನಾಂಕ 01.07.2024 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ಗೊತ್ತಿಲ್ಲ ಮತ್ತು ಈ ಹಿಂದೆ ಎಲ್ಲಿಯೂ ನೋಡಿರುವುದಿಲ್ಲ. ನಾನು 1 ನೇ ಆರೋಪಿಗೆ ಯಾವುದೇ ಸಾಲವನ್ನು ಕೊಟ್ಟಿರುವುದಿಲ್ಲ. ಈ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನೂ ಸಹ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ

ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದಃ**

2) ನಾನು ಗಾರೆ ಕೆಲಸ ಮಾಡುತ್ತೇನೆ. 4 ವರ್ಷಗಳ ಹಿಂದೆ ಕರೋನಾ ಸಾಂಕ್ರಾಮಿಕ ರೋಗದ ಸಂದರ್ಭದಂಲ್ಲಿ ಅಂತರಸನಹಳ್ಳಿ - ಮಧುಗಿರಿ ರಸ್ತೆಯಲ್ಲಿ ರಾಯಲ್ ವೈನ್ಸ್ ಮುಂದೆ ಬೀಡಾ ಅಂಗಡಿಯನ್ನು ಇಟ್ಟುಕೊಂಡಿದ್ದೆ ಎಂದರೆ ಸರಿ. ನಾನು ಬೀಡಾ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದಾಗ 1 ನೇ ಆರೋಪಿಯ ಪರಿಚಯವಾಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಆರೋಪಿ ವಾಟರ್ ಕ್ಯಾನ್ ಹಾಕುವ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅವರು ನನ್ನ ಬಳಿ ಬಂದು ಅವರ ಕಷ್ಟ ಸುಖಗಳನ್ನು ಹೇಳಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಡಿಸೆಂಬರ್ 2020 ರಲ್ಲಿ 1 ನೇ ಆರೋಪಿಯು ನನ್ನ ಅಂಗಡಿಗೆ ಬಂದು ಆಟೋವನ್ನು ಖರೀದಿಸಲು ತನಗೆ ಹಣಕಾಸಿನ ಸಹಾಯ ಮಾಡಿ ರೂ.50 ಸಾವಿರ ಕೊಡಿ ಎಂದು ಕೇಳಿದ್ದ ಎಂದರೆ ಸರಿಯಲ್ಲ. 1 ನೇ ಆರೋಪಿಯು ಆಟೋ ವಾಹನವನ್ನು ಖರೀದಿಸಿದರೆ ನನಗೂ ಸಹ ಸಹಾಯವಾಗುತ್ತದೆ ಎಂದು ತಿಳಿದು ಆತನಿಗೆ ರೂ.50 ಸಾವಿರ ಹಣ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆ ಹಣವನ್ನು ನಾಲ್ಕೈದು ತಿಂಗಳಲ್ಲಿ ತೀರಿಸುತ್ತೇನೆ ಎಂದು ನನಗೆ ಭರವಸೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆದರೆ ಆರೋಪಿಯು ನನಗೆ ಇದುವರೆಗೂ ಸದರಿ ಹಣವನ್ನು ವಾಪಸ್ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

3) ನಾನು ಕೊಟ್ಟ ಹಣದಲ್ಲಿ 1 ನೇ ಆರೋಪಿಯು ಆಟೋವನ್ನು ಖರೀದಿಸಿ ವಾಟರ್ ಕ್ಯಾನ್ ಸಪ್ಲೈ ಮಾಡುತ್ತಿದ್ದನು ಎಂದರೆ ಸರಿಯಲ್ಲ. ನಂತರ ಮತ್ತೆ 1 ನೇ ಆರೋಪಿ ತನ್ನ ಬಳಿ ಬಂದು ರೂ.25 ಸಾವಿರ ಬೇಕು ಎಂದು ನನ್ನ ಹತ್ತಿರ ಕೇಳಿರುತ್ತಾನೆ, ಆಗ ನಾನು ಹಣ ಇಲ್ಲ ಎಂದು ಹೇಳಿದ್ದು, ಆಗ 1 ನೇ ಆರೋಪಿಯು ನನ್ನ ಬಳಿ ಇರುವ ಅಪಾಚಿ ದ್ವಿಚಕ್ರ ವಾಹನವನ್ನು ಯಾರಿಗಾದರೂ ಅಡವಿಟ್ಟು ಹಣ ಕೊಡಿಸುವಂತೆ ಕೇಳಿದ್ದನು

ಎಂದರೆ ಸರಿಯಲ್ಲ. ಚೇತನ್ ಕುಮಾರ್ ರವರು ನನ್ನ ಸ್ನೇಹಿತ ಎಂದರೆ ಸರಿಯಲ್ಲ. ಅವರು ಫ್ಯಾಕ್ಟರಿ ಗೇ ಓಡಾಡಲು ದ್ವಿಚಕ್ರ ಬೇಕಾಗುತ್ತದೆ ಕೊಡಿಸು ಎಂದು ಕೇಳುತ್ತಿದ್ದುದ್ದರಿಂದ ಚೇತನ್ ರವರನ್ನು ಕರೆದು 1 ನೇ ಆರೋಪಿಯ ಅಪಾಚಿ ದ್ವಿಚಕ್ರ ವಾಹನವನ್ನು ಇಟ್ಟುಕೊಂಡು ಅವರಿಗೆ ರೂ.25 ಸಾವಿರ ಕೊಡುವಂತೆ ನಾನು ಹೇಳಿದ್ದರಿಂದ ಚೇತನ್ ರವರು ಒಪ್ಪಿಕೊಂಡು ರೂ.25 ಸಾವಿರ ಹಣವನ್ನು 1 ನೇ ಆರೋಪಿಗೆ ಕೊಟ್ಟಿದ್ದು , ದ್ವಿಚಕ್ರ ವಾಹನವನ್ನು ಚೇತನ್ ರವರಿಗೆ ಒಪ್ಪಿಸಿದ್ದರು ಎಂದರೆ ಸರಿಯಲ್ಲ.

4) ಆದರೆ 7-8 ತಿಂಗಳಾದರೂ ಸಹ ನಾನು ಕೊಟ್ಟಿದ್ದ ರೂ.50 ಸಾವಿರ ಹಣವನ್ನು 1 ನೇ ಆರೋಪಿ ವಾಪಸ್ ಕೊಡಲಿಲ್ಲ ಮತ್ತು ಚೇತನ್ ರವರ ಬಳಿ ತಗೆದುಕೊಂಡಿದ್ದ ರೂ.25 ಸಾವಿರ ಹಣವನ್ನೂ ಸಹ ವಾಪಸ್ ಕೊಡಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ನಿನ್ನ ಮತ್ತು ಚೇತನ್ ರವರ ಬಳಿ ಪಡೆದದುಕೊಂಡಿರುವ ಹಣವನ್ನು ಕೊಡುವಂತೆ ಕೇಳಿದಾಗಲೆಲ್ಲಾ ಕರೋನಾ ಬಂದಿದ್ದರಿಂದ ವ್ಯಾಪಾರ ಇಲ್ಲ , ಕೊಡುತ್ತೇನೆ ಎಂದು ಸಬೂಬು ಹೇಳುತ್ತಿದ್ದ ಎಂದರೆ ಸರಿಯಲ್ಲ. ದಿಃ 19.08.2020 ರಂದು 1 ನೇ ಆರೋಪಿಯು ತನ್ನ ಲಗೇಜ್ ಆಟೋದಲಲ್ಲಿ ನಮ್ಮ ಅಂಗಡಿ ಬಳಿ ನೀರನ್ನು ಹಾಕಲು ಬಂದಿದ್ದು ನನ್ನ ಕಷ್ಟವನ್ನು ಹೇಳಿಕೊಂಡು ಹಣ ಕೊಡುವಂತೆ ಕೇಳಿ ಆಟೋ ವಾಹನವನ್ನು ನನ್ನ ಅಂಗಡಿಯ ಹತ್ತಿರ ನಿಲ್ಲಿಸಿಕೊಂಡು ಹಣ ಕೊಟ್ಟು ವಾಪಸ್ ತೆಗೆದುಕೊಂಡು ಹೋಗುವಂತೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅಗ 1 ನೇ ಆರೋಪಿಯು ತನ್ನ ಸ್ನೇಹಿತನನ್ನು ಕರೆದುಕೊಂಡುಬಂದು ಒಂದು ವರದೊಳಗೆ ನಿನ್ನ ಹಣ ಕೊಡುತ್ತೇನೆ, ಈಗ ಆಟೋ ಬಿಡಿ ಎಂದು ಹೇಳಿ ಬಿಡಿಸಿಕೊಂಡು ಹೋಗಿರುತ್ತಾನೆ ಎಂದರೆ ಸರಿಯಲ್ಲ, ನಂತರ ತುಮಕೂರು ನಗರ ಪೋ.ಠಾಣೆಯಿಂದ ನನಗೆ ಕರೆ ಮಾಡಿ 1 ನೇ ಆರೋಪಿಯು ತನ್ನ ಸ್ನೇಹಿತರೂಂದಿಗೆ ಸೇರಿ ನನಗೆ ಕೊಡಬೇಕಾಗಿದ್ದ ಹಣಕ್ಕೆ ಯಾರನ್ನಾದರೂ ಕೊಲೆ ಮಾಡಿ ಅದರಿಂದ ಹಣವನ್ನು ದೋಚಿ ನನ್ನ ಹಣವನ್ನು ತೀರಿಸುವುದಾಗಿ 1 ನೇ ಆರೋಪಿ ಮತ್ತು ಆತನ ಸ್ನೇಹಿತರು ಮಾತನಾಡಿಕೊಂಡು ಡಿ.ಎಂ,ಪಾಳ್ಯದ ಅರುಣ್ ಕುಮಾರ್

ಎಂಬುವವರ ಮನೆಯಲ್ಲಿ ವಾಸವಾಗಿದ್ದ ಅಂಜಲಿ ಎಂಬ ಹೆಂಗಸನ್ನು ಕೊಲೆ ಮಾಡಿ ಆಕೆಯ ಬಳಿ ಇದ್ದ ರೂ.550 ನ್ನು ಮತ್ತು ಒಂದು ಮೊಬೈಲ್ ನ್ನು ತೆಗೆದುಕೊಂಡು ಬಂದಿರುತ್ತಾರೆಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ, ಈ ಬಗ್ಗೆ ನಾನು ಪೊಲೀಸರ ಮುಂದೆ '" ನನ್ನ ಬೀಡಾ ಅಂಗಡಿಗೆ ............... ಹೇಳಿಕೆಯನ್ನುನೀಡಿರುತ್ತೇನೆ '' ಎಂದು ಈಗ ನನಗೆ ಓದಿ ಹ ೇಳಿದ ನಿಪಿ.20 ರಂತೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ನನಗೆ ಹೆದರಿಸಿರುವುದರಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ.B.K.P.S. ವಕೀಲರಿಂದ : ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ